Sri K. PUTTASWAMY.—Is it a fact that there is inordinate delay in publishing draft rules ?

Sri M. P. PATIL.—I do not think so.

Sri A. V. NARASIMHA REDDY.—Has it come to the notice of the Government that the lands sold by Sri K. C. Reddy are not Inam lands ?

Sri M. P. PATIL.—I do not know anything in the matter.

ಶ್ರೀ ಜಿ. ಎಸ್. ಪುಟ್ಟಣ್ಣಿ.—ಜೋಡಿಗ್ರಾಮದಲ್ಲಿ ಯಾವ ಕ್ರಯ ಪತ್ರವನ್ನು ಬರೆದರೂ ಅದನ್ನು ರಿಜಿಸ್ಟರ್ ಮಾಡಬಹುದೆಂದು Inspector General of Registration ಅವರು ಒಂದು ಸರ್‌ಕ್ಯುಲರ್ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ ಪಿ. ಪಾಟೀಲ್.—ಬಂದಿಲ್ಲ. ಆದರೆ ವಿಚಾರ ಮಾಡುತ್ತೇನೆ.

ಶ್ರೀ ಡಿ. ಮೂಕಪ್ಪ.—ಇನಾಮ್ ರದ್ದಿಯಾತಿ ಕಾನೂನು ಮುಜರಾಯಿ ಜಮೀನಿಗೂ ಅನ್ವಯಿಸುತ್ತದೆಯೇ ?

ಶ್ರೀ ಎಂ. ಪಿ. ಪಾಟೀಲ್.—Religious and Charitable Inams Abolition Act ಎಂದಿದೆ ಅದರ ಪ್ರಕಾರ ಅನ್ವಯಿಸುತ್ತದೆ.

ಶ್ರೀ ಎಸ್. ಆರ್. ರಾಮಯ್ಯ.—ರೈತರ ಹಕ್ಕನ್ನು ಕಸಿದುಕೊಂಡು ಮಾರಿರುವುದನ್ನು ರಿಜಿಸ್ಟರ್ ಮಾಡಿದ್ದರೆ ಅದಕ್ಕೆ ಪರಿಹಾರ ಕೊಡುತ್ತೀರಾ ?

ಶ್ರೀ ಎಂ. ಪಿ. ಪಾಟೀಲ್.—ಆಂಥದನ್ನು ಗಮನಕ್ಕೆ ತಂದರೆ, ಪರಿಶೀಲಿಸುತ್ತೇವೆ.

Sri Kadidal MANJAPPA.—May I know what steps have been taken to implement the provisions contained in the Religious and Charitable Inams Abolition Act ?

Sri M. P. PATIL.—The rules have been finalised only recently and further steps will be taken.

Sri Kadidal MANJAPPA.—After how many months of the passing of the Act the rules were framed ?

Sri M. P. PATIL.—I think one or two months.

Exemption of Stamp duty and Registration fee for short-term loans.

Q.—415. Sri H. C. LINGA REDDY (Malur).—

Will the Government be pleased to state:—

(*a*) whether concession of stamp duty, registration fee and encumbrance certificate exemptions are given by the Government for short-term loans in the State ;

(*b*) for how long these concessions have been in force ;

(*c*) whether any representation has been made by the Apex Bank for continuance of the same ;

(*d*) the action taken thereon by the Government ?

A.—Sri M. P. PATIL (Minister for Revenue).—

(*a*) Yes.

(*b*) For some years.

(*c*) Yes.

(*d*) Orders have been issued continuing the concessions.

Sri H. C. LINGA REDDY.—Was this concession of exemption of Stamp Duty and Registration fee for Short-Term Loan in existence even prior to the grant of concession last year ?

*Sri M. P. PATIL.—Yes.

Sri H. C. LINGA REDDY.—When did the time given for concession expire ?

Sri M. P. PATIL.—The concession was to expire at the end of the last year and the same concession has been continued for one more year.

Sri H. C. LINGA REDDY.—What is the reason for the delay of four months in the matter of giving concession ?

Sri M. P. PATIL.—There is no question of delay. The concession is given from 1st April 1957.

ಶ್ರೀ ಜಿ. ದುಗ್ಗಪ್ಪ.—1-4-1957ರಿಂದ ಈ ರಿಯಾಯಿತಿಯನ್ನು ಕೊಡಲಾಗಿದೆಯೆಂದು ಹೇಳಿದಿರಿ. ಈ ಆಜ್ಞೆ ಕೇಂದ್ರ ಬ್ಯಾಂಕಿನಿಂದ ಬೇರೆ ಬೇರೆ ಕಡೆಗಳಿಗೆ ತಲಪಬೇಕಾದರೆ ಎರಡು ತಿಂಗಳು ತಡವಾಗಿ ತಲಪಿತು. ಇದರಿಂದ ನುಮಾರು ಎರಡು ಸಾವಿರ ರೂಪಾಯಿವರೆಗೆ ರಿಜಿಸ್ಟ್ರೇಷನ್ ಫೀ ಕೊಡಬೇಕಾಗಿ ಬಂತೆಂದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ.ಪಿ. ಪಾಟೀಲ್.—ಅಂಥ ಸಂದರ್ಭಗಳು ನಮ್ಮ ಗಮನಕ್ಕೆ ಬರಲಿಲ್ಲ.

Sri B. S. SHANKARAPPA.—Is it not a fact that exemption allowed expired on 30th March ?

Sri M. P. PATIL.—The concession given previously was to expire by the end of March and concession given now is from the commencement of April.

Sri B. S. SHANKARAPPA.—Is it not a fact that the effect of the order would be from 27th June ?

Sri M. P. PATIL.—I am not sure of the date of the order. But the concession was given from 1st April 1957.

Sri G. SIVAPPA.—Is it not a fact that concession was given from the end of March but the order was passed in June.

Sri M. P. PATIL.—I have no dates here. If the Hon'ble Member requires, I will enquire.

ಶ್ರೀ ಜಿ. ಶಿವಪ್ಪ.—ತಾವು ಮಾರ್ಚಿಯ ಕೊನೆಯಲ್ಲಿ ಮುಗಿದು ಹೋದ ರಿಯಾಯಿತಿಯನ್ನು ಮುಂದುವರಿಸುವ ಸರ್ಕಾರಿ ಆಜ್ಞೆಯನ್ನು ಜೂನ್‌ನಲ್ಲಿ ಮಾಡಿದುದರಿಂದ ಮಧ್ಯೆ ಎರಡು ತಿಂಗಳು ಸಂಘಗಳಲ್ಲಿ ತೊಂದರೆ ಯಾಗಿರುವುದು ಗೊತ್ತಿದೆಯೇ ?

ಅಧ್ಯಕ್ಷರು.—ಶ್ರೀ ದುಗ್ಗಪ್ಪನವರು ಕೇಳಿದ ಪ್ರಶ್ನೆಗೆ ಉತ್ತರ ಹೇಳಿದ್ದಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮಧ್ಯೆ ಎರಡು ತಿಂಗಳ ಅವಧಿಯಲ್ಲಿ ಜನರಿಂದ ಸ್ಟ್ಯಾಂಪ್ ಡ್ಯೂಟಿ ರಿಜಿಸ್ಟ್ರೇಷನ್ ಚಾರ್ಜು ಮುಂತಾದುವುಗಳನ್ನು ತೆಗೆದುಕೊಂಡು ಅವರಿಗೆ ತೊಂದರೆಯಾಗಿದ್ದರೆ ಆ ಹಣವನ್ನು ವಾಪಸು ಮಾಡುತ್ತೀರಾ ?

Sri M. P. PATIL.—I have stated that I will make enquiries. If such cases are brought to my notice I will consider.

Anicut across the Bhima River, Malavalli Taluk.

Q.—528. Sri H. V. VEEREGOWDA (Malavalli).—

Will the Government be pleased to state :—

(*a*) whether they are aware that plans and estimates for the construction of an anicut across the Bhima river near Kodihalli village, Halagur Hobli, Malavalli Taluk, were prepared long back ;

(*b*) whether it is a fact that even the *muchalika* has been executed by the ryots of that area ;

(*c*) why the work has not been started as yet ;

(*d*) whether they would complete the above work early ?

A.—Sri H. K. VEERANNA GOWDH (Minister for Public Works).—

(*a*) Yes, for a tank.

(*b*) No.

(*c*) It was ordered that the work be deferred.

(*d*) The question of taking up the work will be considered after the estimate, which is being recast, is ready and comes up for sanction.

ಶ್ರೀ ಎಚ್. ವಿ. ವೀರೇಗೌಡ.—ಈ ಅಣೆಕಟ್ಟಿನ ಅಂದಾಜೆಷ್ಟಾಗಿದೆ ?

*ಶ್ರೀ ಎಚ್. ಕೆ. ವೀರಣ್ಣಗೌಡ.—ಅದರ ಅಂದಾಜು ಹಾಗೆ ತಿಳಿಸಲು ಸಾಧ್ಯವಿಲ್ಲ. ಕಾರಣ ಮೂರಾವರ್ತಿ ಅಂದಾಜುಗಳನ್ನು ಮಾಡಲಾಯಿತು. ಮೊದಲನೆ ಅಂದಾಜನ್ನು 1948ರಲ್ಲಿ 4ಲಕ್ಷ 17 ಸಾವಿರದ 125ರೂ. ಗಳಿಗೂ ಪುನಃ 1952ರಲ್ಲಿ ಆದ ಅಂದಾಜು 7 ಲಕ್ಷ 60 ಸಾವಿರವೆಂದೂ ಮತ್ತು ಈಗ ಹಾಲಿ ನಮ್ಮ ಮುಂದಿರ ತಕ್ಕ ಅಂದಾಜು ಪ್ರಕಾರ 8 ಲಕ್ಷ ರೂಪಾಯಿಗಳೆಂದೂ ತಿಳಿದುಬಂದಿದೆ. ನಿಮಗೆ ಈ ಪೈಕಿ ಯಾವುದು ಬೇಕೋ ನೋಡಿಕೊಳ್ಳಿ.

*ಶ್ರೀ ಎಚ್. ವಿ. ವೀರೇಗೌಡ.—ಅಲ್ಲಿರತಕ್ಕರೈತರು ಎಕರೆಯೊಂದಕ್ಕೆ 500ರೂಪಾಯಿಗಳ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಮುಚ್ಚಳಿಕೆ ಬರೆದು ಕೊಟ್ಟಿದ್ದಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರೀತಿ ಮುಚ್ಚಳಿಕೆ ಬರೆಸಿಕೊಳ್ಳುವ ಮಾಟ್ಟಕ್ಕೆ ಇನ್ನೂ ಬಂದಿಲ್ಲ. ಆದರೆ ಕೆಲವು ರೈತರು 450ರೂಪಾಯಿಗಳವರೆಗೂ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಅರ್ಜಿ ಬರೆದು ಕೊಂಡಿದ್ದಾರೆ.

ಶ್ರೀ ಎಚ್. ವಿ. ವೀರೇಗೌಡ.—ಕೆಲವರು 750 ರೂಪಾಯಿಗಳವರೆಗೂ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಅರ್ಜಿ ಕೊಟ್ಟಿರುವುದು ನಿಜವಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹಾಗೂ ಕೆಲವು ಅರ್ಜಿಗಳು ಬಂದಿವೆ.

ಶ್ರೀ ಎಚ್. ವಿ. ವೀರೇಗೌಡ.—ಎಚ್ಚರಿಕೆ ಜಾಗ್ರತೆ ಈ ಕೆಲಸವನ್ನು ಕೈಗೊಳ್ಳಲು ಏರ್ಪಾಡು ಮಾಡುವಿರಾ?

ಶ್ರೀ ಎಚ್. ಕೆ. ವೀರಣ್ಣಗೌಡ.—ರೈತರು ಹಾಗೆ ಹೆಚ್ಚಾಗಿ ಕಾಂಟ್ರಿಬ್ಯೂಷನ್ ಕೊಡುತ್ತಾರೆಂಬ ಮಾತ್ರಕ್ಕೆ ಈ ಕೆಲಸವನ್ನು ಕೈಗೊಳ್ಳುವುದಕ್ಕಾಗುವುದಿಲ್ಲ. ಆದರೆ ಈ ಪ್ರಾಜೆಕ್ಟನ್ನು ಅಲ್ಲಿ ಕಟ್ಟಲು ಇರತಕ್ಕ ಸಾಧ್ಯಾಸಾಧ್ಯತೆಗಳನ್ನೂ ಮತ್ತು ಇವರ ಉಪಯೋಗ ಎಷ್ಟಾಗುತ್ತದೆಂಬುದನ್ನೂ ನೋಡಿ ಒಂದು ತೀರ್ಮಾನಕ್ಕೆ ಬರಬೇಕಾಗಿದೆ.

ಶ್ರೀ ಎಂ. ಲಿಂಗೇಗೌಡ.—ತಾವೀಗ ಈ ಕೋಡೀ ಹಳ್ಳಿ ಹತ್ತಿರ ಕಟ್ಟಿಸಬೇಕೆಂದು ಅಂದಾಜು ಮಾಡುತ್ತಿರುವ ಪ್ರಾಜೆಕ್ಟ್‌ನ್ನು 'ಹೊಣವಿನಹಳ್ಳಿ ಪ್ರಾಜೆಕ್ಟ್' ಎಂದು ಕರೆಯುತ್ತೀರಾ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದುವರೆಗೂ ನಾವೇನೂ ಆ ರೀತಿ ಇದನ್ನು ಕರೆದಿರುವುದಿಲ್ಲ.

ಶ್ರೀ ಎಂ. ಲಿಂಗೇಗೌಡ.—1948ರಲ್ಲಿ ಮೊದಲು ಅಂದಾಜಾಗುವಾಗ್ಗೆ ಅದಕ್ಕೆ 20 ವರ್ಷಗಳ ಹಿಂದಿನಿಂದಲೂ ಹೀಗೇ ಈ ಕೆಲಸ ಬರಿ ಅಂದಾಜಾಗುವುದರಲ್ಲೇ ಪರ್ಯವಸಾನವಾಗಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು.

ಶ್ರೀ ಎಂ. ಲಿಂಗೇಗೌಡ.—ಈ ಹಿಂದೆಯೇ ಇದರ ಬಗ್ಗೆ ಒಂದು ತೀರ್ಮಾನ ಕೈಗೊಂಡಿರಲಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ಹಿಂದೆ ಸ್ಥಳ ಪರೀಕ್ಷೆ ನಡೆಸಿದಾಗ ಚೀಫ್ ಇಂಜಿನಿಯರ್ ಅವರು ಈ ಪ್ರಾಜೆಕ್ಟ್‌ನ್ನು ಕೋಡಿಹಳ್ಳಿ ಹತ್ತಿರ ಕಟ್ಟಿದರೆ ಬಹಳ ಲಾಭದಾಯಕವಾಗಿರುತ್ತದೆಂದು ತಿಳಿಸಿಲ್ಲವೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ರೀತಿ ಅವರು ಎಲ್ಲಿಯೂ ತಮ್ಮ ಅಭಿಪ್ರಾಯ ತಿಳಿಸಿದ್ದಂತೆ ಕಂಡು ಬರಲಿಲ್ಲ. ಈ ಪ್ರಾಜೆಕ್ಟನ್ನು ಎರಡು ಜಾಗದಲ್ಲಿ ಕಟ್ಟಬೇಕೆಂಬ ಅಭಿಪ್ರಾಯವಿದೆ. ಎರಡು ತಾಲ್ಲೂಕಿನ ಜನರು ಒಬ್ಬೊಬ್ಬರು ಒಂದೊಂದು ಕಡೆ ಕಟ್ಟಿಸಿಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಈ ಎರಡ್ಕೂ